ಸಿ. ಸಿ. ನಂ.- **309/2021**

ಡಿ.ಡಬ್ಲ್ಯೂ.- **1**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ 12-02-2025 ರಂದು ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಮೌಲಾ ಹುಸೇನ್ ಸೌದಾಗರ |
| ತಂದೆಯ ಹೆಸರು - | ಖಾಜಾ |
| ವಯಸ್ಸು - | 52 ವರ್ಷಗಳು |
| ಉದ್ಯೋಗ - | ಟ್ರಾನ್ಸಪೋರ್ಟ್ ವ್ಯವಹಾರ |
| ವಾಸಸ್ಥಳ - | ಹೊಸಪೇಟೆ |

ಮುಖ್ಯ ವಿಚಾರಣೆ- ಆರೋಪಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದ-

ದಿಃ **20.04.2009** ರಲ್ಲಿ ನಾನು ದೂರುದಾರರಿಂದ ನಾನು ರೂ. **1,50,000.00** ಹಣ ಪಡೆದಿದ್ದೆ. ಆ ಸಮಯದಲ್ಲಿ ನಾನು ದೂರುದಾರರಿಗೆ ಎಸ್ ಬಿ ಎಂ ನ ಒಂದು ಬಾಂಡ್ ಪೇಪರ್, ಫ್ರಾಮಿಸರಿ ನೋಟ್, ಖಾಲಿ ಹಾಳೆಯಲ್ಲಿ ನನ್ನ ಸಹಿ ಮತ್ತು ಒಂದು ಗ್ರಾಮೀಣ ಬ್ಯಾಂಕಿನ ಒಂದು ಖಾಲಿ ಚೆಕ್ ನ್ನು ಕೊಟ್ಟಿದ್ದೆ. **2013** ರವರೆಗೂ ನಾನು ಸದರಿ ಹಣಕ್ಕೆ ಬಡ್ಡಿ ಪಾವತಿ ಮಾಡುತ್ತಿದ್ದೆ. ದೂರುದಾರರು ನನಗೆ ಬೇರೆ ಅಂಗಡಿಗಳಿಂದ ಟೈರ್ ಕೊಡಿಸುತ್ತಿದ್ದರು. ನಾನು ಅಂಗಡಿಗೆ ನೇರವಾಗಿ ಹಣ ಪಾವತಿ ಮಾಡುತ್ತಿದ್ದೆ. ನಾನು ದೂರುದಾರರಿಂದ ಹಣ ಪಡೆದಾಗ ಅವರಿಗೆ ಬ್ಯಾಂಕ್ ವರ್ಗಾವಣೆ ಮೂಲಕ ಹಣವನ್ನು ಪಾವತಿ ಮಾಡುತ್ತಿದ್ದೆ. **2014** ಕ್ಕೆ ನಾನು ದೂರುದಾರರಿಗೆ ನೀಡಬೇಕಾದ ಎಲ್ಲಾ ಹಣವನ್ನು ಪಾವತಿ ಮಾಡಿದ್ದೆ. ಆದರೂ ಸಹ ದೂರುದಾರರು ರೂ. **12,77,800.00** ಹಣ ಕೊಡು ಎಂದು ಕೇಳಿದ್ದರು. ಸದರಿ ಹಣವನ್ನು ನಾನು ದೂರುದಾರರಿಂದ ಪಡೆದ ಬಗ್ಗೆ ಯಾವುದೆ ದಾಖಲೆ ಇರುವುದಿಲ್ಲ.

**2.** ಒಂದು ದಿನ ನಾನು ವ್ಯಾಪಾರದ ಸಲುವಾಗಿ ಗೋವಾಗೆ ಹೋಗಿದ್ದೆ. ಹೋಗುವಾಗ ನಾನು ಎಂಟು ಸೇಲ್ಫ ಚೆಕ್ ಮತ್ತು ನಾಲ್ಕು ಖಾಲಿ ಚೆಕ್ ಗಳಿಗೆ ಸಹಿ ಮಾಡಿ ನಮ್ಮ ಮನೆಯಲ್ಲಿ ಇದ್ದ ಕಚೇರಿಯ ಡ್ರಾ ನಲ್ಲಿ ಇಟ್ಟು ಹೋಗಿದ್ದೆ. ದೂರುದಾರರು ಹಣವನ್ನು ಕೇಳಲು ನಮ್ಮ ಮನೆಗೆ ಮತ್ತು ಕಚೇರಿಗೆ ಬರುತ್ತಿದ್ದರು. ನಾನು ಇಲ್ಲದ ಸಮಯದಲ್ಲಿ ದೂರುದಾರರು ನಮ್ಮ ಮನೆಗೆ ಬಂದು **12** ಚೆಕ್ ಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಈ ಬಗ್ಗೆ ಪೋಲಿಸರಿಗೆ

ಸಿ. ಸಿ. ನಂ.- **309/2021**

ಡಿ.ಡಬ್ಲ್ಯೂ.- **1**

ದೂರು ಕೊಡಲು ಹೋದಾಗ ಅವರು ಕೊರ್ಟ್ ನಲ್ಲಿ ನ್ಯಾಯ ಪಡೆಯಿರಿ ಎಂದು ಹೇಳಿ ಕಳುಹಿಸಿದ್ದರು.

**3. 2021** ರಲ್ಲಿ ದೂರುದಾರರು ತಮ್ಮ ವಕೀಲರ ಮೂಲಕ ನನಗೆ ನೋಟಿಸ್ ಕಳುಹಿಸಿದರು. ಸದರಿ ನೋಟಿಸ್ ಗೆ ನಾನು ಉತ್ತರವನ್ನು ಕೊಟ್ಟಿದ್ದೆ. ಆದರೂ ಸಹ ಅವರು ಪ್ರಕರಣ ದಾಖಲು ಮಾಡಿದ್ದಾರೆ. ದೂರುದಾರರು ನನ್ನಿಂದ ಹಲವಾರು ಬಾರಿ ತಮ್ಮ ಕುಟುಂಬ ಸದಸ್ಯರ ಹೆಸರಿಗೆ ಹಣವನ್ನು ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದರು. ಕಾರ್ಪೋರೇಷನ್ ಬ್ಯಾಂಕ್ ನವರು ದಿಃ **31.03.2021** ರ ಒಳಗೆ ತನ್ನ ಎಲ್ಲಾ ಚೆಕ್ ಗಳನ್ನು ವಾಪಸ್ಸು ಕೊಡಬೇಕು ಎಂದು ಸುತ್ತೋಲೆ ನೀಡಿದ್ದರಿಂದ ದೂರುದಾರರು ತಮ್ಮ ಬಳಿ ಇದ್ದ ಎಲ್ಲಾ ಚೆಕ್ ಗಳನ್ನು ಸೂಕೊ ಬ್ಯಾಂಕ್ ಗೆ ಸಲ್ಲಿಸಿ ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ಆ ಕಾರಣ ಪ್ರಸ್ತುತ ಪ್ರಕರಣವನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ದೂರುದಾರರ ಗೈರು ಹಾಜರಿದ್ದು ನ್ಯಾಯಯುತ ದೃಷ್ಟಿಯಿಂದ ಪಾಟೀ ಸವಾಲು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು,
ಹೊಸಪೇಟೆ.